ವಿಜಯ ಕರ್ನಾಟಕ

**Friday, January 21st, 2011**

# ವಿದ್ಯಾವಂತರು ರಾಜಕೀಯ ಪ್ರವೇಶಿಸಲಿ

**ವಿಕ ಸುದ್ದಿಲೋಕ** ಬೆಂಗಳೂರು

ವಿದ್ಯಾವಂತರು ರಾಜಕೀಯ ಪ್ರವೇಶ ಮಾಡಬೇಕು ಎಂದು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಹೇಳಿದರು.

ಜೈನ್ ಯೂನಿವರ್ಸಿಟಿ ಪ್ರೆಸ್ ಗುರುವಾರ ಏರ್ಪಡಿಸಿದ್ದ ಲೇಖಕ ಡಾ. ಸಂದೀಪ್ ಶಾಸ್ತ್ರಿ ಅವರ 'ಕರ್ನಾಟಕ ಪೊಲಿಟಿಕ್ಸ್' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತ್ತೀಚಿನ ರಾಜಕಾರಣದ ಕುರಿತು ಓದಲು ಸಾಧ್ಯವಿಲ್ಲ, ಆದರೆ, ರಾಜಕೀಯ ಸುಧಾರಿಸಬೇಕೆಂದರೆ ಒಳ್ಳೆಯವರು, ವಿದ್ಯಾವಂತರು ಈ ಕ್ಷೇತ್ರಕ್ಕೆ ಪ್ರವೇಶ ಮಾಡುವುದು ಅತ್ಯವಶ್ಯ. ದೇಶಕ್ಕೆ ಶ್ರೇಷ್ಠ ತತ್ತ್ವಜ್ಞಾನಿಗಳನ್ನು, ವಿಜ್ಞಾನಿಗಳನ್ನು ಮತ್ತು ರಾಜಕಾರಣಿಗಳನ್ನು ನೀಡಿದ ಕೀರ್ತಿ ರಾಜ್ಯಕ್ಕೆ ಸಲ್ಲುತ್ತದೆ. ಸಮಾಜ ಸುಧಾರಕ ಬಸವಣ್ಣ, ಶ್ರೇಷ್ಠ ಎಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯ, ಅತ್ಯುತ್ತಮ ರಾಜಕಾರಣಿ ಕೆಂಗಲ್ ಹನುಮಂತಯ್ಯ ಸೇರಿದಂತೆ ಹಲವು ಮಹನೀಯರನ್ನು ನೀಡಿದ ರಾಜ್ಯ ಕರ್ನಾಟಕ. ಅವರ ಮಾತು, ಮಾಡಿದ ಕಾರ್ಯ ಇಂದಿಗೂ ಪ್ರಸ್ತುತ ಎಂದರು.

ರಾಜ್ಯದ ಬಗ್ಗೆ ಮೈಸೂರು ಸಂಸ್ಥಾನದ ಕಾಲದಿಂದಲೂ ಗೊತ್ತಿದೆ. ರಾಜ್ಯ ಮತ್ತು ಇಲ್ಲಿನ ರಾಜಕಾರಣ ಅದ್ವಿತೀಯವಾಗಿದೆ. ದೇಶದ ಎಲ್ಲ ರಾಜ್ಯಗಳನ್ನು ಸುತ್ತಿದ್ದೇನೆ. ಆದರೆ, ಕರ್ನಾಟಕದಷ್ಟು ಯಾವ ರಾಜ್ಯವೂ ಆಕರ್ಷಿಸಿಲ್ಲ. ಇಲ್ಲಿನ ಧಾರ್ಮಿಕತೆ, ನದಿ, ಜನ, ಕಾಫಿ ಎಲ್ಲವೂ ಅತ್ಯುತ್ತಮ ಎಂದು ಹೇಳಿದರು.




**ಜೈನ್ ಯೂನಿವರ್ಸಿಟಿ ಪ್ರೆಸ್ ಜೈನ್ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ 'ಕರ್ನಾಟಕ ಪೊಲಿಟಿಕ್ಸ್' ಆಂಗ್ಲ ಕೃತಿ ಬಿಡುಗಡೆ ಮಾಡಿದರು. ಲೇಖಕ ಡಾ. ಸಂದೀಪ್ ಶಾಸ್ತ್ರಿ, ಉಪ ಕುಲಪತಿ ಡಾ.ಎನ್. ಸುಂದರ್‌ರಾಜನ್, ಜೈನ ವಿಶ್ವವಿದ್ಯಾಲಯ ಕುಲಪತಿ ಡಾ.ಆರ್. ಚೆನ್‌ರಾಜ್ ಜೈನ್ ಉಪಸ್ಥಿತರಿದ್ದರು.**

ಶಿಕ್ಷಣ ಕ್ಷೇತ್ರಕ್ಕೆ ಜೈನ ಸಮುದಾಯ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ. ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಗುಣ ಮಟ್ಟದ ಶಿಕ್ಷಣ ನೀಡಬೇಕಿದ್ದು, ಜೈನ್ ವಿವಿ ಹಾರ್ವರ್ಡ್,ಯಾಲೆ, ಎಂಐಟಿಯಂತೆ ವಿಸ್ತರಿಸಬೇಕು.ಎಲ್ಲ ಸಮುದಾಯದ ಪ್ರತಿಭಾವಂತರಿಗೂ ಉತ್ತಮ ಶಿಕ್ಷಣ ನೀಡಬೇಕು. ಬೆಂಗಳೂರಿನಲ್ಲಿ 68 ಸಾವಿರ ಎಂಜಿನಿಯರಿಂಗ್ ವಿದ್ಯಾರ್ಥಿಗಳಿದ್ದಾರೆ ಎಂದರು.

ಜೈನ್ ವಿವಿ ಕುಲಪತಿ ಡಾ.ಆರ್. ಚೆನ್‌ರಾಜ್ ಜೈನ್, ಡಾ.ಎನ್. ಸುಂದರ್‌ರಾಜನ್, ಡಾ. ಸಂದೀಪ್ ಶಾಸ್ತ್ರಿ, ಪ್ರೊ.ಎನ್.ವಿ.ಎಚ್. ಕೃಷ್ಣನ್ ಉಪಸ್ಥಿತರಿದ್ದರು.